# ಜೊಲ್ಲೆ ಗ್ರೂಪ್ ದರ್ಪಣ

**ವಾರ್ತಾ ಪತ್ರ**

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ಡಿಸೆಂಬರ 2023–ಸಂಪುಟ–8 ಸಂಚಿಕೆ–1




## ನಾಡ ಕಂಡ ಧೀಮಂತ ನಾಯಕಿ ಸೌ. ಶಶಿಕಲಾ ಜೊಲ್ಲೆ

ಜೊಲ್ಲೆ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಶೈಕ್ಷಣಿಕ ಸೇವೆ ನೀಡುತ್ತಿದ್ದಾರೆ. ಭಾಷಾ ಭಾಂಧವ್ಯದೊಂದಿಗೆ ಕನ್ನಡದ ಅಸ್ಮಿತೆಯನ್ನು ಕಾಯ್ದು ಅನ್ಯ ಭಾಷಿಕರಿಂದಲೇ ಕನ್ನಡದ ಕಾಯಕ ಮಾಡಿಸಿ ಅನ್ಯ ಭಾಷಿಕರ ಮನ ಗೆದ್ದ ಗಡಿ ಕನ್ನಡದ ಕಾವಲುಗಾರ್ತಿ, ಕ್ಷೇತ್ರದ ಜನರ ನಾಡಿಮಿಡಿತ ಅರಿತು ಅವರ ಸುಖ ದುಃಖಗಳಲ್ಲಿ ಸಕ್ರಿಯರಾಗುತ್ತಾರೆ. ಇವರ ಕಾಯಕಕ್ಕೆ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ, ಉತ್ತಮ ಅವ್ವ ಪ್ರಶಸ್ತಿ, ಮಹಿಳಾ ರತ್ನ ಪ್ರಶಸ್ತಿ, ಸಹಿತ ಹಲವಾರು ಪ್ರಶಸ್ತಿಗಳು ಮುಡಿಗೇರಿಸಿಕೊಂಡಿದ್ದಾರೆ.

ಕನ್ನಡ ನಾಡು ಮತ್ತು ಬೆಳಗಾವಿ ಜಿಲ್ಲೆಯ ರಾಜಕಾರಣ, ಸಮಾಜಕಾರಣ, ಔದ್ಯೋಗಿಕ, ಅಧ್ಯಾತ್ಮಿಕ, ಶೈಕ್ಷಣಿಕ, ಸಹಕಾರ ಕ್ಷೇತ್ರದಲ್ಲಿ ಜೊಲ್ಲೆ ಕುಟುಂಬದ ಹೆಜ್ಜೆಗುರುತುಗಳು ವಿಶಿಷ್ಟವಾಗಿವೆ. ಅಂತಹ ಮನೆತನದ ಆದರ್ಶ ಮಹಿಳಾಮಣಿ ಸೌ. ಶಶಿಕಲಾ ಜೊಲ್ಲೆ ಅವರು ನಿಪ್ಪಾಣಿ ತಾಲೂಕಿನ ಭಿವಶಿ ಗ್ರಾಮದ ಸುಸಂಸ್ಕೃತ ಹರದಾರೆ ಮನೆತನದ ಶೇವಂತಾ ಮತ್ತು ಶ್ರೀಪತಿ ಆದರ್ಶ ದಂಪತಿಗಳ ಉದರದಲ್ಲಿ 20 ನವೆಂಬರ್ 1969ರಲ್ಲಿ ಜನಿಸಿದರು.

ಬಾಲ್ಯದಿಂದಲೂ ತಿಕ್ಷ್ಣಮತಿಗಳಾದ ಇವರು ತಂದೆ–ತಾಯಿಗಳ ಆದರ್ಶಗಳನ್ನು ಮುಂದಿಟ್ಟುಕೊಂಡು ಬೆಳೆದರು. ಮುಂದೆ ನಿಪ್ಪಾಣಿ, ಅಥಣಿಯಲ್ಲಿ ವಿದ್ಯಾಭ್ಯಾಸ ಪೂರೈಸಿದರು. ಬಾಲ್ಯದಿಂದಲೂ ಇವರಿಗೆ ಅಧ್ಯಾತ್ಮದ ಕಡೆಗೆ ವಿಶೇಷ ಒಲವು. ಮುಂದೆ ಯಕ್ಸಂಬಾದ ಆದರ್ಶ ಜೊಲ್ಲೆ ಮನೆತನದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಅವರೊಂದಿಗೆ ವಿವಾಹವಾಗಿ ಎರಡು ಮಕ್ಕಳ ತಾಯಿಯಾಗಿ, ಆದರ್ಶ ಸೊನೆಯಾಗಿ ಅತ್ತೆ, ಪತಿಯ ಮಾರ್ಗದರ್ಶನದಲ್ಲಿ ಮನೆತನದ ಭಾರ ಹೊತ್ತರು. ಮನೆತನದ ಘನತೆ ಗೌರವ ಕಾಪಾಡುತ್ತಾ ನಂದಾದೀಪವಾಗಿ ಬಂದ ಇವರದು ನಿಜಕ್ಕೂ ಮೌಲ್ಯದ ಬದುಕು, ಜ್ಯೋತಿಪ್ರಸಾದ, ಬಸವಪ್ರಸಾದರ ಆದರ್ಶ ಮಾತೆಯಾಗಿ ಬಸವತತ್ವದ ಅಡಿಯಲ್ಲಿ ಬದುಕು ನಡೆಸಿದರು. ಜೀವನದಲ್ಲಿ ಬರುವ ಸಂಕಷ್ಟಗಳಿಗೆ ಹೆದರದೆ ಎಲ್ಲವನ್ನೂ ಸವಾಲಾಗಿ ಸ್ವೀಕರಿಸಿ ಸಮಾಜಸೇವೆಯ ಹಂಬಲವಿಟ್ಟು ಸಹಕಾರ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆಯನ್ನು ತೆರೆದು ಅದರ ಅಡಿಯಲ್ಲಿ ಸೇವಾರಂಭ ಮಾಡಿದರು, ನೊಂದವರ, ಬೆಂದವರ ಧ್ವನಿಯಾಗಿ ಬಡವರ ಕಣ್ಣೀರು ಒರೆಸಿದ ಮಾತೃ ಹೃದಯದ ಮಹಾತಾಯಿ ಇವರು.

### ಜನಪರ ಕಾಯಕ

ಕನ್ನಡ ನಾಡಿನ ಹಲವಾರು ಶರಣರ, ಸಂತರ ಒಡನಾಡಿಗಳಾಗಿ ಅಧ್ಯಾತ್ಮ ಜೀವನಕ್ಕೆ ಬದುಕಿನ ಕೆಲ ಸಮಯ ಮಿಸಲಿಟ್ಟು ಮಹಿಳಾ ರತ್ನವಾಗಿ ಬೆಳೆಯುತ್ತಾ ನಾಲಿಗೆ ಮೇಲೆ ಶರಣರ ವಚನಗಳನ್ನು ಇಟ್ಟು ನುಡಿಸುತ್ತಾ ಉತ್ತಮ ವಾಗ್ಮಿಯಾಗಿ ಬೆಳಗಾವಿ ಜಿಲ್ಲೆಯ ಕದಳಿ ವೇದಿಕೆ ಅಧ್ಯಕ್ಷರಾಗಿ, ಭಾರತೀಯ ಜನತಾ ಪಕ್ಷದ ಕರ್ನಾಟಕ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಸಮಾಜ ಸೇವೆಯೊಂದಿಗೆ ರಾಜಕೀಯಕ್ಕೆ ಕಾಲಿಟ್ಟು ಹಲವಾರು ಏಳು–ಬೀಳುಗಳನ್ನು ಕಂಡು ಸಂಕಷ್ಟಗಳನ್ನು ಸವಾಲಾಗಿ ಸ್ವೀಕರಿಸಿ ಸೋಲೇ ಗೆಲುವಿನ ಸೋಪಾನವೆಂಬುದರಿತು ಜನರ ಹತ್ತಿರಕ್ಕೆ ತೆರಳಿ ಜನಪರ ಕಾಯಕ ಮಾಡತೊಡಗಿದರು.

**ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು**
**ಕಲ್ಲಾಗು ಕಷ್ಟಗಳ ಮಳೆವಿಧಿ ಸುರಿಯೇ**
**ಬೆಲ್ಲ ಸಕ್ಕರೆಯಾಗು ದಿನದುರ್ಬಲರಿಗೆ**
**ಎಲ್ಲರೊಳಗೊಂದಾಗು ಮಂಕುತಿಮ್ಮ**

ಎನ್ನುವ ಕನ್ನಡದ ಕವಿ ಡಿವಿಜಿ ಅವರ ಮಾತಿನಂತೆ ಜನರ ಬಡವರ, ಅನಾಥರ, ನೊಂದವರ ಪರ ಕೆಲಸಮಾಡಿ ಜನನಾಯಕಿಯಾಗಿ ಹೊರಹೊಮ್ಮಿ 2013ರಲ್ಲಿ ನಿಪ್ಪಾಣಿ, ಶಾಸಕರಾಗಿ ಆಯ್ಕೆಯಾದರು. ಜನಸೇವೆಯೇ ಜನಾರ್ಧನ ಸೇವೆ ಎಂದು ತಿಳಿದು ತಮ್ಮ ಕಾಯಕವನ್ನು ಆರಂಭಿಸಿ, ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ ನಿಪ್ಪಾಣಿಯ ಪ್ರಥಮ ಮಹಿಳಾ ಶಾಸಕಿಯಾಗಿ ಇತಿಹಾಸದ ಪುಟ ಸೇರಿ ಹಿಂದುಳಿದ ನಿಪ್ಪಾಣಿ ತಾಲೂಕನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಲು ನೂರಾರು ಕೋಟಿ ಅನುದಾನ ತಂದು ನಿಪ್ಪಾಣಿ ಚಿತ್ರಣವನ್ನೇ ಬದಲಿಸಿದ್ದಾರೆ. ಇವರ ಜನಪರ ಕಾಯಕ ಕಂಡ ನಿಪ್ಪಾಣಿ ಜನರು 2018ರಲ್ಲಿ ನಿಪ್ಪಾಣಿ ಶಾಸಕರಾಗಿ ಮರು ಆಯ್ಕೆ ಮಾಡಿದರು. ಅವರ ಅಭಿವೃದ್ಧಿ ಕೆಲಸಗಳಿಗೆ ಹಿಡಿದ ಕೈಗನ್ನಡಿ ಇದು. ಮುಂದೆ ಅಭಿವೃದ್ಧಿ ಪರ್ವವನ್ನೇ ಪ್ರಾರಂಭಿಸಿ, ಇಂದು ಸಾವಿರಾರು ಕೋಟಿ ಅನುದಾನ ತಂದು ನಿಪ್ಪಾಣಿ ಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿದ್ದಾರೆ.

ಇಂಥ ಅಭಿವೃದ್ಧಿಯ ಹರಿಕಾರರೂ ಬಡವರ ಬಂಧು, ದೀನದಲಿತರ ಆಶಾಕಿರಣ, ನೊಂದವರ ಧ್ವನಿ, ವಿಕಾಸ ರತ್ನ ಕನ್ನಡನಾಡು ಕಂಡ ಅಪರೂಪದ ನಾಯಕಿಯಾದ ಇವರು ಇಂದು ಸಾರ್ಥಕ 53 ವಸಂತಗಳನ್ನು ದಾಟಿ 54ಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಇಂತಹ ಶುಭ ಸಮಯದಲ್ಲಿ ಶುಭ ಕೋರುತ್ತಾ ನಮ್ಮ ನಾಯಕಿ ಇನ್ನೂ ರಾಜಕೀಯ ಯಶಸ್ಸು ಕಾಣಲಿ, ಅವರಿಗೆ ಬಸವಾದಿ ಶರಣರು, ಕನ್ನಡಾಂಬೆ, ಭಾರತಾಂಬೆ ಉತ್ತಮ ಆರೋಗ್ಯ ದೀರ್ಘ ಆಯಸ್ಸು ಯಶಸ್ಸು ಕರುಣಿಸಲಿ ಎಂದು ಪ್ರಾರ್ಥಿಸುತ್ತಾ ಜನ್ಮದಿನದ ಶುಭಾಶಯಗಳನ್ನು ಕೋರುವೆ.


**ಪ್ರೊ. ಮಿಥುನ ಅಂಕಲಿ**
ಸಹ ಪ್ರಾಧ್ಯಾಪಕರು
ಬಸವಜ್ಯೋತಿ ಪದವಿ ಮಹಾವಿದ್ಯಾಲಯ, ನಣದಿ.



**ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)**

ಕ್ರಿಯಾತ್ಮಕ ಹಾಗೂ ಪ್ರಗತಿಶೀಲ ಅರ್ಥವ್ಯವಸ್ಥೆ



# ಭಾರತದಲ್ಲಿ ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನ

ವಿಶ್ವದ ಮಾರಣಾಂತಿಕ ಕಾಯಿಲೆಗಳಲ್ಲಿ ಒಂದಾದ ಕ್ಯಾನ್ಸರ್, ಜಾಗತಿಕವಾಗಿ ಮತ್ತು ಭಾರತದಲ್ಲಿ ಹೆಚ್ಚುತ್ತಿದೆ. 10 ಭಾರತೀಯರಲ್ಲಿ ಒಬ್ಬರು ತಮ್ಮ ಜೀವಿತಾವಧಿಯಲ್ಲಿ ಕ್ಯಾನ್ಸರ್ ಅನ್ನು ಹೊಂದುತ್ತಾರೆ ಮತ್ತು 15 ರಲ್ಲಿ ಒಬ್ಬರು ಸಾಯುತ್ತಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಬಿಡುಗಡೆ ಮಾಡಿದ ಇಂಟರ್ನ್ಯಾಷನಲ್ ಏಜೆನ್ಸಿ ಫಾರ್ ರಿಸರ್ಚ್ ಆನ್ ಕ್ಯಾನ್ಸರ್ (ಐಎಆರ್‌ಸಿ) ವಿಶ್ವ ಕ್ಯಾನ್ಸರ್ ವರದಿ ಹೇಳಿದೆ. ಕ್ಯಾನ್ಸರ್ ಬೆಳವಣಿಗೆಯಲ್ಲಿ ಜೀವನಶೈಲಿಯ ಅಂಶಗಳು ಪ್ರಮುಖ ಪಾತ್ರವಹಿಸುತ್ತವೆ. ಅಧಿಕ ತೂಕ, ಕಡಿಮೆ ದೈಹಿಕ ಚಟುವಟಿಕೆ ಮತ್ತು ಜಡ ಜೀವನಶೈಲಿಯೊಂದಿಗೆ ಸಂಬಂಧಿಸಿರುವ ಸ್ತನ ಕ್ಯಾನ್ಸರ್ ಮತ್ತು ಕೊಲೊರೆಕ್ಟಮ್ ಕ್ಯಾನ್ಸರ್ ಹೆಚ್ಚಾಗುವುದರಲ್ಲಿ ಆಶ್ಚರ್ಯವಿಲ್ಲ. ಭಾರತದಲ್ಲಿ ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನವನ್ನು ವಿವಿಧ ರೀತಿಯ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ಆಚರಿಸಲಾಗುತ್ತದೆ, ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲಿ ಪತ್ತೆಹಚ್ಚುವ ಅಗತ್ಯತೆ ಮತ್ತು ರೋಗದ ವಿರುದ್ಧ ಹೋರಾಡಲು ಒಬ್ಬರು ತೆಗೆದುಕೊಳ್ಳಬೇಕಾದ ಪ್ರಮುಖ ಜೀವನಶೈಲಿ ಬದಲಾವಣೆಗಳು.

WHO ಪ್ರಕಾರ, ಕ್ಯಾನ್ಸರ್ ಎನ್ನುವುದು ದೇಹದ ಯಾವುದೇ ಅಂಗ ಅಥವಾ ಅಂಗಾಂಶದಲ್ಲಿ ಪ್ರಾರಂಭವಾಗುವ ರೋಗಗಳ ಒಂದು ದೊಡ್ಡ ಗುಂಪು ಮತ್ತು ಅಸಹಜ ಜೀವಕೋಶಗಳು ಅನಿಯಂತ್ರಿತವಾಗಿ ಬೆಳೆದಾಗ ಮತ್ತು ದೇಹದ ಇತರ ಭಾಗಗಳಿಗೆ (ಮೆಟಾಸ್ಟಾಟಿಕ್ ಕ್ಯಾನ್ಸರ್) ಹರಡಿದಾಗ ಸಂಭವಿಸುತ್ತದೆ. ಜಾಗತಿಕವಾಗಿ ಸಾವಿಗೆ ಎರಡನೇ ಪ್ರಮುಖ ಕಾರಣ, ಶ್ವಾಸಕೋಶ, ಪ್ರಾಸ್ಟೇಟ್, ಕೊಲೊರೆಕ್ಟಲ್, ಹೊಟ್ಟೆ ಮತ್ತು ಯಕೃತ್ತಿನ ಕ್ಯಾನ್ಸರ್ ಪುರುಷರಲ್ಲಿ ಸಾಮಾನ್ಯ ರೀತಿಯ ಕ್ಯಾನ್ಸರ್ಗಳಾಗಿವೆ. ಸ್ತನ, ಕೊಲೊರೆಕ್ಟಲ್, ಶ್ವಾಸಕೋಶ, ಗರ್ಭಕಂಠ ಮತ್ತು ಥೈರಾಯ್ಡ್ ಇನ್ನೊಂದೆಡೆ ಮಹಿಳೆಯರ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ.

### ಭಾರತದಲ್ಲಿ ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನದ ದಿನಾಂಕ

‘ ವಿವಿಧ ರೀತಿಯ ಕ್ಯಾನ್ಸರ್‌ನ ಲಕ್ಷಣಗಳು, ತೀವ್ರತೆ ಮತ್ತು ಚಿಕಿತ್ಸೆಯ ಬಗ್ಗೆ ಜಾಗೃತಿ ಮೂಡಿಸಲು ಭಾರತದಲ್ಲಿ ಪ್ರತಿ ವರ್ಷ ನವೆಂಬರ್ 7 ರಂದು ಭಾರತದಲ್ಲಿ ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನವನ್ನು ಆಚರಿಸಲಾಗುತ್ತದೆ.

### ಭಾರತದಲ್ಲಿ ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನದ ಇತಿಹಾಸ

2014 ರ ಸೆಪ್ಟೆಂಬರ್‌ನಲ್ಲಿ ಭಾರತದಲ್ಲಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಡಾ ಹರ್ಷವರ್ಧನ್ ಅವರು ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನವನ್ನು ಪ್ರಾರಂಭಿಸಿದರು. ಒಂದು ಸಮಿತಿಯನ್ನು ರಚಿಸಲಾಯಿತು ಮತ್ತು ನವೆಂಬರ್ 7 ಅನ್ನು ವಾರ್ಷಿಕ ಆಚರಣೆಯ ದಿನವಾಗಿ ಗೊತ್ತುಪಡಿಸಲಾಯಿತು ಮತ್ತು ಕ್ಯಾನ್ಸರ್ ಬಗ್ಗೆ ಜನಸಾಮಾನ್ಯರಿಗೆ ತಿಳಿಸುವ ಮತ್ತು ಶಿಕ್ಷಣ ನೀಡುವ ಗುರಿಯನ್ನು ಹೊಂದಿದೆ. ಚಿಕಿತ್ಸೆ, ಮತ್ತು ಹೇಗೆ ಆರಂಭಿಕ ಕ್ರಮವು ಬದುಕುಳಿಯುವಿಕೆಯ ಪ್ರಮಾಣವನ್ನು ತೀವ್ರವಾಗಿ ಸುಧಾರಿಸುತ್ತದೆ.

### ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನದ ಮಹತ್ವ

ಪತ್ತೆಯಾದಾಗ 50% ಕ್ಕಿಂತ ಹೆಚ್ಚು ಕ್ಯಾನ್ಸರ್ ಪ್ರಕರಣಗಳು ಮುಂದುವರಿದ ಹಂತಗಳಲ್ಲಿವೆ, ಇದು ಬದುಕುಳಿಯುವ ಸಾಧ್ಯತೆಗಳ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಆದಾಗ್ಯೂ, ಆರಂಭಿಕ ಪತ್ತೆ ಪೂರ್ಣ ಚೇತರಿಕೆಗೆ ಸಹಾಯ ಮಾಡುತ್ತದೆ. ವಿವಿಧ ಸ್ಕ್ರೀನಿಂಗ್ ವಿಧಾನಗಳ ಸಹಾಯದಿಂದ ಕ್ಯಾನ್ಸರ್ ಅಥವಾ ಪೂರ್ವ-ಕ್ಯಾನ್ಸರ್ ಬದಲಾವಣೆಗಳನ್ನು ಗುರುತಿಸುವುದು ಕ್ಯಾನ್ಸರ್ ಬೆಳವಣಿಗೆಯನ್ನು ನಿಧಾನಗೊಳಿಸಲು ಅಥವಾ ತಡೆಯಲು ಸಹಾಯ ಮಾಡುವ ಪ್ರಯತ್ನಗಳಿಗೆ ಸಮಯವನ್ನು ನೀಡುತ್ತದೆ.

# ವಿಶ್ವ ಮಕ್ಕಳ ದಿನ-2023

ವಿಶ್ವ ಮಕ್ಕಳ ದಿನವು ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಅವರ ಯೋಗಕ್ಷೇಮವನ್ನು ಸುಧಾರಿಸಲು ಸಮರ್ಪಿಸಲಾಗಿದೆ. 1959 ರಲ್ಲಿ UN ಜನರಲ್ ಅಸೆಂಬ್ಲಿಯಿಂದ ಮಕ್ಕಳ ಹಕ್ಕುಗಳ ಘೋಷಣೆಯ ನೆನಪಿಗಾಗಿ ಇದನ್ನು ವಾರ್ಷಿಕವಾಗಿ ನವೆಂಬರ್ 20 ರಂದು ಆಚರಿಸಲಾಗುತ್ತದೆ.

ಬಾಲ್ಯವು ಜೀವನದ ಏಕೈಕ ಹಂತವಾಗಿದೆ, ಅಲ್ಲಿ ಒಬ್ಬರು ಚಿಂತಿಸಬೇಕಾದ ಕನಿಷ್ಠ ಸಂಖ್ಯೆಯ ವಿಷಯಗಳೊಂದಿಗೆ ನಿರಾತಂಕವಾಗಿ ಬದುಕಬಹುದು. ಇದು ಜೀವನದ ಒಂದು ನಿರ್ಣಾಯಕ ಹಂತವಾಗಿದ್ದು, ಉತ್ತಮ ಭವಿಷ್ಯವನ್ನು ಖಚಿತಪಡಿಸಿಕೊಳ್ಳಲು ಗರಿಷ್ಠ ಪ್ರಮಾಣದ ಆರೈಕೆ, ಪೋಷಣೆ ಮತ್ತು ಕೇಂದ್ರೀಕೃತ ಪಾಲನೆಯ ಅಗತ್ಯವಿರುತ್ತದೆ. ನವೆಂಬರ್ 20 ರಂದು “ವಿಶ್ವ ಮಕ್ಕಳ ದಿನ” ಆಚರಣೆಯು ಪ್ರಪಂಚದಾದ್ಯಂತ ಮಕ್ಕಳ ಕಲ್ಯಾಣ ಮತ್ತು ಅಂತರಾಷ್ಟ್ರೀಯ ಒಗ್ಗಟ್ಟನ್ನು ಉತ್ತೇಜಿಸುವ ಮಾರ್ಗವಾಗಿ ಕಾರ್ಯನಿರ್ವಹಿಸುತ್ತದೆ.

ದಿನದ ಆಚರಣೆಯನ್ನು ಗುರುತಿಸಲು, ರಾಷ್ಟ್ರಪತಿ ಭವನದಂತಹ ಸಾಂಪ್ರದಾಯಿಕ ರಚನೆಗಳು ಭಾನುವಾರ ಭಾರತದಲ್ಲಿ ಮತ್ತು ಪ್ರಪಂಚದಾದ್ಯಂತ ನೀಲಿ ಬಣ್ಣದಲ್ಲಿ ಬೆಳಗಿದವು.

ಈ ದಿನವನ್ನು ಮಕ್ಕಳಿಗಾಗಿ ಮೀಸಲಿಡಲಾಗಿದೆ ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಅವರ ಕಲ್ಯಾಣವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. ಈ ದಿನವನ್ನು ವಾರ್ಷಿಕವಾಗಿ ನವೆಂಬರ್ 20 ರಂದು UN ಜನರಲ್ ಅಸೆಂಬ್ಲಿಯು 1959 ರಂದು ಮಕ್ಕಳ ಹಕ್ಕುಗಳ ಘೋಷಣೆಯ ನೆನಪಿಗಾಗಿ ಆಚರಿಸಲಾಗುತ್ತದೆ. ದಿನದ ಬಗ್ಗೆ ಎಲ್ಲಾ ವಿವರಗಳು ಇಲ್ಲಿವೆ.

**ವಿಶ್ವ ಮಕ್ಕಳ ದಿನ 2023: ಇತಿಹಾಸ**

ಈ ದಿನವನ್ನು ಮೊದಲ ಬಾರಿಗೆ 1954 ರಲ್ಲಿ ಸಾರ್ವತ್ರಿಕ ಮಕ್ಕಳ ದಿನ ಎಂದು ಆಚರಿಸಲಾಯಿತು. ಈಗ ಇದನ್ನು ಪ್ರತಿ ವರ್ಷ ನವೆಂಬರ್ 20 ರಂದು ಅಂತರರಾಷ್ಟ್ರೀಯ ಸಹೋದರತ್ವದ ಪ್ರಚಾರಕ್ಕಾಗಿ, ಮಕ್ಕಳ ಕಲ್ಯಾಣ ಮತ್ತು ಅವರ ಹಕ್ಕುಗಳ ಬಗ್ಗೆ ಜಾಗೃತಿಗಾಗಿ ಆಚರಿಸಲಾಗುತ್ತದೆ.

ಈ ದಿನ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಕ್ಕಳ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿತು. ಅದೇ ದಿನ, UNGA ಮಕ್ಕಳ ಹಕ್ಕುಗಳ ಸಮಾವೇಶವನ್ನು ಅಂಗೀಕರಿಸಿತು.

1990 ರ ನಂತರ, ಯುಎನ್‌ಜಿಎ ಮಕ್ಕಳ ಹಕ್ಕುಗಳ ಘೋಷಣೆ ಮತ್ತು ಸಮಾವೇಶ ಎರಡನ್ನೂ ಅಂಗೀಕರಿಸಿದ ದಿನಾಂಕದ ವಾರ್ಷಿಕೋತ್ಸವವನ್ನು ಸಹ ದಿನವು ಗುರುತಿಸುತ್ತದೆ.

**ವಿಶ್ವ ಮಕ್ಕಳ ದಿನ 2023: ಮಹತ್ವ**

ವಿಶ್ವ ಮಕ್ಕಳ ದಿನಾಚರಣೆಯು ಎಲ್ಲಾ ವೃತ್ತಿಯಲ್ಲಿರುವ ಜನರಿಗೆ ಮಕ್ಕಳ ಹಕ್ಕುಗಳು ಮತ್ತು ಅವರ ಕಲ್ಯಾಣದ ಬಗ್ಗೆ ಜಾಗೃತಿ ಮೂಡಿಸಲು ಒಂದು ಅವಕಾಶವಾಗಿದೆ. ಯುವ ಪೀಳಿಗೆಗೆ ಜನರು ಮಾಡಬಹುದಾದ ಸಣ್ಣ ಆಯ್ಕೆಗಳನ್ನು ಆಳವಾಗಿ ಅಧ್ಯಯನ ಮಾಡಲು ಇದು ಅವಕಾಶವನ್ನು ತರುತ್ತದೆ.

ತಾಯಂದಿರು ಮತ್ತು ತಂದೆ, ಶಿಕ್ಷಕರು, ದಾದಿಯರು ಮತ್ತು ವೈದ್ಯರು, ಸರ್ಕಾರಿ ನಾಯಕರು ಮತ್ತು ನಾಗರಿಕ ಸಮಾಜದ ಕಾರ್ಯಕರ್ತರು, ಧಾರ್ಮಿಕ ಮತ್ತು ಸಮುದಾಯದ ಹಿರಿಯರು, ಕಾರ್ಪೊರೇಟ್ ಮೂಲಗಳು ಮತ್ತು ಮಾಧ್ಯಮ ವೃತ್ತಿಪರರು, ಹಾಗೆಯೇ ಯುವಕರು ಮತ್ತು ಮಕ್ಕಳು ವಿಶ್ವ ಮಕ್ಕಳ ದಿನಾಚರಣೆಗೆ ಅರ್ಥವನ್ನು ಸೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಬಹುದು.

# ಶ್ರೀ ಕನಕದಾಸ

ಹರಿಪಂಥದಲ್ಲಿ ಶ್ರೇಷ್ಠ ಹರಿಕಾರರು
ಹರಿದಾಸರೆಂದರೆ ಶ್ರೇಷ್ಠ ಭಕ್ತ ಕನಕದಾಸರು
ಕಲಿ ಕವಿ ಭಕ್ತ ದಾಸ ದಾನಿ ಎನಿಸಿಕೊಂಡವರು
ಕನಕದಾಸರು ಸಮಾಜದ ಮೌಲ್ಯಗಳನ್ನು ತಿಳಿಪಡಿಸಿದರು
ಬಾಡ ಗ್ರಾಮದಲ್ಲಿ ಜನಿಸಿ ಬಾಡದ ಹೂವು
ತಂದೆ ಬೀರಪ್ಪ ತಾಯಿ ಬಚ್ಚಮ್ಮನ ಕರುಳಿನ ಕುಡಿ
ತಿಮ್ಮಪ್ಪನ ವರದಿಂದ ಕುರುಬ ಕುಲದಲ್ಲಿ ಜನಿಸಿದ
ತಿಮ್ಮಪ್ಪ ನಾಯಕನಾಗಿ ಕುಸ್ತಿ ಯುದ್ದ ಜ್ಞಾನ ಪಂಡಿತ ಕಲಿತ

ಎಪ್ಪತೆಂಟು ಗ್ರಾಮಗಳ ದಂಡನಾಯಕನಾದ
ವಿಜಯನಗರದ ಕಾಲದ ಯುದ್ಧ ಪರಿಣಿತನಾದ
ಸಾವು ನೋವು ಕಂಡು ಮನದಲ್ಲಿ ಪರವರ್ತನೆಗೊಂಡು
ಕುಲದೇವ ಕಾಗಿನೆಲೆಯ ಜೀರ್ಣೋದ್ಧಾರದಲ್ಲಿ ಕನಕ ಪಡೆದ
ಕನಕ ನನಗ್ಯಾಕೆ ದಾನ ನೀಡಿ ಕನಕಪ್ಪ ಎನಿಸಿಕೊಂಡ

ಗುರು ವ್ಯಾಸರ ಸೇವೆ ಮಾಡಿ ವಿದ್ಯೆ ಪಡೆದ
ಪುರಂದರ ದಾಸರ ಸ್ನೇಹ ಬೆಳೆಸಿ ಸ್ನೇಹ ಪ್ರೀತಿನಾದ
ಕನ್ನಡ ನುಡಿ ಕವಿ ಕೃತಿಗಳನ ಬರೆದು ಕನ್ನಡ ಕೀರ್ತಿ ಹಬ್ಬಿಸಿದ
ಕರ್ನಾಟಕ ಸಂಗೀತವನ್ನು ಹೆಮ್ಮರವಾಗಿ ಬೆಳೆಸಿದ
ಕೀರ್ತನೆ ವಿಭಾಗಗಳನ್ನು ಬರೆದು ಹಾಡಿ ಅಶ್ವಿನಿ ದೇವತೆ ಎನಿಸಿಕೊಂಡ

ಕೃಷ್ಣನು ಆಕಳುಗಾಯಿ, ಕನಕ ಕುರಿಗಾಯಿ
ಕೃಷ್ಣನ ಕೊರಳುನಾದ, ಕನಕನ ತಂಬೂರಿ ನಾದ
ಕೃಷ್ಣ ದರ್ಶನಕ್ಕಾಗಿ ಕೃಷ್ಣನ ಮಂದಿರವೇ ಸೇರೇ ಹಿಡಿದ
ಕೃಷ್ಣನನ್ನು ಭಕ್ತಿಯ, ಸಂಗೀತದಲ್ಲಿ ಮುಳುಗಿಸಿ ದರುಶನ ಪಡೆದ
ಕುಲಕುಲವನ್ನು ಧಿಕ್ಕರಿಸಿ ನೈಜಭಕ್ತಿಯನ್ನು ಕನಕನ ಕಿಂಡಿಯನಿಸಿಕೊಂಡ

ಮೋಹನ ತರಂಗಿಣಿಯಲ್ಲಿ ಕೃಷ್ಣ ಲೀಲೆ ತೋರಿಸಿದ
ನಳ ಚರಿತ್ರೆಯಲ್ಲಿ ದಾಂಪತ್ಯ ಪ್ರೇಮದ ಜೀವನ ತೋರಿಸಿದ
ಹರಿಭಕ್ತಸಾರದಲ್ಲಿ ಹರಿ ಕೀರ್ತಸೆಯಲ್ಲಿ ಭಕ್ತಿಯಲ್ಲಿ ಮುಳುಗಿಸಿದ
ರಾಮಧಾನ್ಯ ಚರಿತ್ರೆಯಲ್ಲಿ ಅನ್ನಪ್ರಿಯ ರಾಗಿಯ ಶ್ರೇಷ್ಠತೆ ತಿಳಿಸಿದ
ಹರಿನಾಮಸೂತ್ರದಲ್ಲಿ ಹರಿಪ್ರೇಮವನ್ನು ತಿಳಿಸಿದ

ಕುಲ ಕುಲವೆಂದು ಹೊಡೆದಾರದಿರಿ ಸಂದೇಶ ಸಾರಿದ
ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ ಪ್ರಶ್ನಿಸಿದ
ತಲ್ಲನಸದಿರು ತಾಳು ಮನವಿ ಎಂದು ದಾರಿ ತೋರಿದ
ನಾ ಹೋದರೆ ಹೋಗೆನು ಸ್ವರ್ಗಕ್ಕೆ ಹೋದೆನು ಎಂದು ಅರುಹಿದ

ಶ್ರೀ. ರಾಮಚಂದ್ರ ಸನದಿ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

## ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ





ನೂತನ ಬಜಾರ ಶಾಖೆ ಉದ್ಘಾಟನೆ

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ ಇದರ ನೂತನ ಬಜಾರ ಶಾಖೆ ನಿಪ್ಪಾಣಿಯನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ, ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಹಾಗೂ ಶ್ರೀ. ಬಸವಪ್ರಸಾದ ಜೊಲ್ಲೆಯವರು ಉದ್ಘಾಟಿಸುತ್ತಿರುವುದು.


ಚಾಲನೆ ನೀಡುತ್ತಿರುವುದು

ನಿಪ್ಪಾಣಿಯಲ್ಲಿ, ಕಾರ್ಮಿಕ ಇಲಾಖೆಯ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಾರ್ಮಿಕರ ಮಕ್ಕಳಿಗೆ ಕಿಟ್‌ಗಳ ವಿತರಣೆ ಹಾಗೂ ಕಾರ್ಮಿಕರಿಗೆ ಹಾಗೂ ಅವಲಂಬಿತರಿಗೆ ಆರೋಗ್ಯ ತಪಾಸಣೆ ಹಾಗೂ ತರಬೇತಿ ಶಿಬಿರ ಕಾರ್ಯಕ್ರಮವನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರೀಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಉದ್ಘಾಟಿಸಿ, ಚಾಲನೆ ನೀಡುತ್ತಿರುವುದು.



ಉದ್ಘಾಟಿಸುತ್ತಿರುವುದು

ಹಾವೇರಿ ಜಿಲ್ಲೆಯ ಕೇರಿಮತ್ತಿಹಳ್ಳಿಯಲ್ಲಿ ವಿಶೇಷ ಒಲಿಂಪಿಕ್ಸ್ ಭಾರತ್ ಕರ್ನಾಟಕ ದಾವಣಗೆರೆ ವಲಯ ಮಟ್ಟದ ವಿಶೇಷ ಶಿಕ್ಷಕರ ತರಬೇತಿ ಕಾರ್ಯಾಗಾರ ಸಭೆಯನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಹಾಗೂ ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಯವರು ಉದ್ಘಾಟಿಸುತ್ತಿರುವುದು.




**ಚಾಲನೆ ನೀಡುತ್ತಿರುವುದು**

ಹಾರೂಗೇರಿ ಪಟ್ಟಣದಲ್ಲಿ ಜೊಲ್ಲೆ ಗ್ರೂಪ್ ವತಿಯಿಂದ ಆಯೋಜಿಸಿದ ಪುರುಷ ಮತ್ತು ಮಹಿಳೆಯರ ಎಂ.ಪಿ.ಟ್ರೋಫಿ ಭವ್ಯ ಕಬ್ಬಡ್ಡಿ ಪಂದ್ಯಾವಳಿಗೆ ಪರಮಾನಂದವಾಡಿಯ ಪ.ಪೂಜ್ಯ ಶ್ರೀ ಅಭಿನವ ಬ್ರಹ್ಮಾನಂದ ಮಹಾಸ್ವಾಮಿಜಿಗಳ ದಿವ್ಯಸಾನಿಧ್ಯದಲ್ಲಿ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಚಾಲನೆ ನೀಡುತ್ತಿರುವುದು.



**ಉದ್ಘಾಟಿಸುತ್ತಿರುವುದು**

ಯಕ್ಸಂಬಾ ಪಟ್ಟಣದಲ್ಲಿ ವಿಶೇಷ ಒಲಿಂಪಿಕ್ಸ್ ಭಾರತ್ ಕರ್ನಾಟಕ ಬೆಳಗಾವಿ ವಲಯ ಮಟ್ಟದ ವಿಶೇಷ ಶಿಕ್ಷಕರ ತರಬೇತಿ ಕಾರ್ಯಾಗಾರ ಸಭೆಯನ್ನು ಜೊಲ್ಲೆ ದಂಪತಿ ಉದ್ಘಾಟಿಸುತ್ತಿರುವ ದೃಶ್ಯ.



**ಬಹುಮಾನ ನೀಡುತ್ತಿರುವುದು**

ಗಳತಗಾ ಗ್ರಾಮದಲ್ಲಿ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರ ಜನ್ಮದಿನದ ನಿಮಿತ್ಯ ಆಯೋಜಿಸಿದ ಭವ್ಯ ಎತ್ತಿನಗಾಡಿ ಹಾಗೂ ಕುದುರೆಗಾಡಿ ಶರ್ಯತ್ತಿನಲ್ಲಿ ವಿಜೇತರಿಗೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರ ಬಹುಮಾನ ವಿತರಿಸುತ್ತಿರುವ ದೃಶ್ಯ.



**ಚಾಲನೆ ನೀಡುತ್ತಿರುವುದು**

ನಿಪ್ಪಾಣಿ ನಗರದಲ್ಲಿ ನಿಪ್ಪಾಣಿ ಸಮಾಧಿಮಠದ ಶ್ರೀಗಳಾದ ಪ. ಪೂ. ಶ್ರೀ ಪ್ರಾನಲಿಂಗ ಮಹಾಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಜರುಗಿದ ಸಾಮೂಹಿಕ ಶ್ರೀ ಸಹಸ್ರಲಿಂಗ ಪೂಜೆ ಹಾಗೂ ಧಾರ್ಮಿಕ ಸಭಾ ಸಮಾರಂಭಕ್ಕೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ದೀಪ ಬೆಳಗಿಸುವುದರ ಮೂಲಕ ಚಾಲನೆ ನೀಡುತ್ತಿರುವುದು.



**ಕನಕದಾಸರ ಪ್ರತಿಮೆ ಅನಾವರಣ**

ಯಕ್ಸಂಬಾ ಪಟ್ಟಣದ ಬೀರೇಶ್ವರ ದೇವಸ್ಥಾನ ಆವರಣದಲ್ಲಿ ಜೊಲ್ಲೆ ಗ್ರೂಪ್ ವತಿಯಿಂದ 7,71,000/- ಮೊತ್ತದಲ್ಲಿ ಮಹಾನ್ ದಾರ್ಶನಿಕ, ಕೀರ್ತನಕಾರರಾದ ಕನಕದಾಸರ ಕಂಚಿನ ಪ್ರತಿಮೆಯನ್ನು ಜೊಲ್ಲೆ ದಂಪತಿ ಅನಾವರಣಗೋಳಿಸಿ ಮಾಲಾರ್ಪನೆ ಮಾಡುತ್ತಿರುವ ದೃಶ್ಯ.




**ಚಾಲನೆ ನೀಡುತ್ತಿರುವುದು**

ಕುರ್ಲಿ ಗ್ರಾಮದಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರ ಜನ್ಮದಿನದ ನಿಮಿತ್ಯ ಆಯೋಜಿಸಿದ ಯಶೋಧಾನಂದ ಮಹಾ ಮ್ಯಾರಾಥಾನ್ (ದೂರದ ಓಟ)ಸ್ಪರ್ಧೆಗೆ ಜೊಲ್ಲೆ ದಂಪತಿ ಚಾಲನೆ ನೀಡುತ್ತಿರುವ ದೃಶ್ಯ.



**ಭೇಟಿ**

ಹುಕ್ಕೇರಿ ತಾಲೂಕಿನ ಸಂಕೇಶ್ವರ ಪಟ್ಟಣದ ಕಾರ್ತಿಕ ಪೂರ್ಣಿಮಾ ನಿಮಿತ್ಯ ಶ್ರೀ ಪಾರ್ಶ್ವಲಬ್ದಿಪುರಮ್ ಶ್ವೇತಾಂಬರ ಜೈನ ಮಂದಿರಕ್ಕೆ ಜೊಲ್ಲೆ ದಂಪತಿ ಭೇಟಿ ನೀಡಿ, ಪಾರ್ಶ್ವನಾಥ ತೀರ್ಥಂಕರ ದರ್ಶನ ಪಡೆದುಕೊಂಡ ದೃಶ್ಯ.



**ಕನಕದಾಸ ಜಯಂತಿ**

ಜೊಲ್ಲೆ ಎಜ್ಯುಕೇಶನ್ ಸೊಸೈಟಿಯ ಅಂಗ ಸಂಸ್ಥೆಯಾದ ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಸಂತ ಶ್ರೇಷ್ಠ ಭಕ್ತ ಕನಕದಾಸರ 536 ನೇ ಜಯಂತಿಯ ನಿಮಿತ್ಯ ಭಾವಚಿತ್ರಕ್ಕೆ ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಯವರು ಪೂಜೆ ಸಲ್ಲಿಸಿದ ದೃಶ್ಯ.

ಜೊಲ್ಲೆ ಉದ್ಯೋಗ ಸಮೂಹ ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ- 591244 Ph : 9844469288 / 7760983792 E-mail : darpanjus6@gmail.com
ಪ್ರಧಾನ ಸಂಪಾದಕರು :- ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ